**ಕರ್ನಾಟಕ ಸರ್ಕಾರ**

**ಜಲಾನಯನ ಅಭಿವೃದ್ಧಿ ಇಲಾಖೆ**

ಸಂ/ಜಅಇ/ಜಾಚ/2011-12

ಆಯುಕ್ತರ ಕಾರ್ಯಾಲಯ
ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ,ಕ.ಗೃ.ಮಂ.ಕಟ್ಟಡ,ಕಾವೇರಿ ಭವನ,
ಕೆಂಪೇಗೌಡ ರಸ್ತೆ, ಬೆಂಗಳೂರು - 560 009
ದಿನಾಂಕ:16.01.2012

**ವಿಷಯ:IWMP ಅಡಿಯಲ್ಲಿ 2011-12ನೇ ಸಾಲಿನಲ್ಲಿ ಪಶು ಸಂಗೋಪನಾ ಚಟುವಟಿಕೆ ಗಳನ್ನು ಅನುಷ್ಠಾನ ಮಾಡುವ ಬಗ್ಗೆ.**

**ಉಲ್ಲೇಖ: 1) ಈ ಕಛೇರಿ ಪತ್ರ ಸಂ :ಜಅಇ.IWMP/SLNA/ತಾ. ಹುದ್ದೆ /2010-11, ದಿನಾಂಕ :25-02-11**

**2) ದಿನಾಂಕ 19.11.2011ರಂದು ಆಯುಕ್ತರ ಅದ್ಯಕ್ಷತೆಯಲ್ಲಿ ನಡೆದ ಪಶು ಸಂಗೋಪನಾ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.**

**3) ಆಯುಕ್ತರ ಟಿಪ್ಪಣಿಯ ಕಂಡಿಕೆ 10 ರಂತೆ.**

**4) ಈ ಕಛೇರಿ ಸುತ್ತೋಲೆ ದಿನಾಂಕ :18-03-2011. (ಜಾನುವಾರು ಶಿಬಿರಗಳನ್ನು ಏರ್ಪಡಿಸುವ ಕುರಿತು)**

**<u>ಪೀಟಿಕೆ:</u>**

ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮದಡಿಯಲ್ಲಿ, ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ಜಿಲ್ಲಾಮಟ್ಟ ದಲ್ಲಿ ದತ್ತಾಂಶ ಕೋಶ (WCDC) ಸ್ಥಾಪಿಸಲು ರಾಜ್ಯದ 26 ಜಿಲ್ಲೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ತಾಂತ್ರಿಕ ಪರಿಣಿತ ರನ್ನು ನಿಯೋಜನೆ /ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಆದೇಶಿಸಲಾಗಿದ್ದು,ಮೊದಲನೇ ಹಂತದಲ್ಲಿ 16 ಜಿಲ್ಲೆಗಳಿಗೆ ಮಾತ್ರ ಸಹಾಯಕ ನಿರ್ದೇಶಕರು (ಪಶುಸಂಗೋಪನೆ)ಗಳನ್ನು ನಿಯೋಜಿಸಲು ಉಲ್ಲೇಖ (1) ರಂತೆ ಪಶುಪಾ ಲನೆ ಮತ್ತು ಪಶುವೈದ್ಯ ಸೇವಾ ಇಲಾಖೆಯ ಆಯುಕ್ತರನ್ನು ಕೋರಲಾಗಿತ್ತು. ಅದರಂತೆ 12 ಸಹಾಯಕ ನಿರ್ದೇಶಕರು (ಪಶುಸಂಗೋಪನೆ)ಗಳನ್ನು ಈ ಇಲಾಖೆಗೆ ನಿಯೋಜಿಸಲಾಗಿದೆ.ಈಗಾಗಲೇ 4 ಜಾನುವಾರು ವಿಸ್ತರಣಾಧಿಕಾರಿಗಳು ಸುಜಲ-II (RIDF) ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಒಟ್ಟು 16 ಪಶುಸಂಗೋಪನಾ ಅಧಿಕಾರಿಗಳು ಈ ಇಲಾಖೆ ಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಸಮಗ್ರ ಜಲಾನಯನ ನಿರ್ವಹಣಾ ಕಾರ್ಯಕ್ರಮದಡಿಯಲ್ಲಿ ಪಶುಸಂಗೋಪನಾ ಕಾರ್ಯಕ್ರಮಗಳಾದ ಮೇವು ಅಭಿವೃದ್ಧಿ, ಜಾನುವಾರು ಆರೋಗ್ಯ ಶಿಬಿರಗಳನ್ನು ಏರ್ಪಡಿಸುವುದು,ಪಶುಸಂಗೋಪನೆ ಆಧಾರಿತ ಜೀವನಾಧಾರ ಚಟುವಟಿಕೆಗಳ ಅನುಷ್ಠಾನ,ಸಾಮರ್ಥ್ಯ ಬಲವರ್ಧನೆ ಇತ್ಯಾದಿಗಳನ್ನು ಮಾರ್ಗಸೂಚಿಗಳಂತೆ ಅನುಷ್ಠಾನ ಮಾಡುವರು.

ಸದರಿ ಅಧಿಕಾರಿಗಳಿಗೆ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ನಿರ್ವಹಿಸಬೇಕಾದ ಚಟುವಟಿಕೆಗಳ ಬಗ್ಗೆ ತರಬೇತಿಯನ್ನು ನೀಡಲಾಗಿದೆ.ಈ ಅಧಿಕಾರಿಗಳ ಮೇಲುಸ್ತು ವಾರಿಯಲ್ಲಿ ವಿವಿಧ ಪಶುಸಂಗೋಪನಾ ಚಟುವಟಿಕೆಗಳನ್ನು ಅನುಷ್ಠಾನ ಮಾಡಬಹುದಾಗಿದೆ.ಈ ಅಧಿಕಾರಿಗಳ ದಿನಾಂಕ 19.11.2011ರಂದು ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾನ್ಯ ಆಯುಕ್ತರು ಸೂಚಿಸಿದಂತೆ (ಉಲ್ಲೇಖ 2) IWMP ಯೋಜನೆಯ 2011-12ನೇ ಸಾಲಿನ ಮಾರ್ಚ್ 2012 ರೊಳಗೆ ಅನುಷ್ಠಾನ ಮಾಡಬಹುದಾದ ಜಾನುವಾರು ಚಟುವಟಿಕೆಗಳನ್ನು (ಭೌತಿಕ ಮತ್ತು ಆರ್ಥಿಕ) ನಮೂನೆ ಯಲ್ಲಿ ಭರ್ತಿಮಾಡಿ ಜಿಲ್ಲಾ ಸಹಾಯಕ ನಿರ್ದೇಶಕರುಗಳು (ಪ.ಸಂ) ಹಾಗೂ ಜಾನುವಾರು ವಿಸ್ತರಣಾಧಿಕಾರಿಗಳು ಸಲ್ಲಿಸಿರುತ್ತಾರೆ.

ಜಲಾನಯನ ಪ್ರದೇಶದಲ್ಲಿನ ಜಾನುವಾರುಗಳ ಆರೋಗ್ಯವನ್ನು ಸುಧಾರಿಸಲು, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು, ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಲು ಹಾಗೂ ರೈತರ ಆರ್ಥಿಕ ಮಟ್ಟವನ್ನು ಸುಧಾರಿಸಲು ಈ ಕೆಳಕಂಡ ಜಾನುವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ನಿರ್ಣಯಿಸಲಾಗಿದೆ. ಆದ ಕಾರಣ ಈ ಆದೇಶ.

**ಕಛೇರಿ ಆದೇಶ**

**IWMP ಅಡಿಯಲ್ಲಿ 2011-12ನೇ ಸಾಲಿನಲ್ಲಿ ಪಶು ಸಂಗೋಪನಾ ಚಟುವಟಿಕೆಗಳನ್ನು ಅನುಷ್ಠಾನ ಮಾಡುವುದು.**

ಈ ಕೆಳಕಂಡ ಅನುಬಂಧ-A ನಲ್ಲಿ ಸೂಚಿಸಿರುವ ಚಟುವಟಿಕೆಗಳನ್ನು IWMP ಯೋಜನೆಯ ಭೂ ಉಪಚಾರ ಘಟಕದ ಅಡಿಯಲ್ಲಿ ನಿವ್ವಳ ಯೋಜನೆಯಂತೆ, DPRನಲ್ಲಿ ಅಳವಡಿಸಿಕೊಂಡು ತತ್ಸಂಬಂದವಾಗಿ ಕ್ರಿಯಾ ಯೋಜನೆ ತಯಾರಿಸಿ ಅನುಷ್ಠಾನ ಮಾಡುವುದು.

ಅನುಬಂಧ-B ನಲ್ಲಿ ಸೂಚಿಸಿರುವ ಚಟುವಟಿಕೆಗಳನ್ನು IWMP ಯೋಜನೆಯ ಉತ್ಪಾದನಾ ಪದ್ದತಿಗಳು ಮತ್ತು ಕಿರು ಉದ್ದಿಮೆಗಳ ಅಡಿಯಲ್ಲಿ ಮಾರ್ಗ ಸೂಚಿಗಳಂತೆ ಅನುಷ್ಠಾನ ಮಾಡುವುದು. ಸ್ಥಳೀಯವಾಗಿ ಚಟುವಟಿಕೆಗಳ ಮಾರ್ಪಾಟು ಅಗತ್ಯವಿದ್ದಲ್ಲಿ ಮಾರ್ಪಡಿಸಿಕೊಂಡು ಅನುಷ್ಠಾನ ಮಾಡುವುದು.ವಿವಿಧ ಚಟುವಟಿಕೆಗಳ ಅನುಷ್ಠಾನವನ್ನು ಮಾರ್ಗಸೂಚಿಗಳನ್ನು ಪಾಲಿಸಿ ಅನುಷ್ಠಾನ ಮಾಡುವುದು. ಈ ಚಟುವಟಿಕೆಗಳನ್ನು ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ನಿರ್ದೇಶಕರು(ಪ.ಸಂ)/ಜಾನುವಾರು ವಿಸ್ತರಣಾಧಿಕಾರಿಗಳು ಅಗತ್ಯ ತಾಂತ್ರಿಕ ಮಾಹಿತಿ ನೀಡುವರು ಹಾಗೂ ಚಟುವಟಿಕೆಗಳ ಅನುಷ್ಠಾನದ ಮೇಲು ಉಸ್ತುವಾರಿ ಮಾಡುವರು. ಜಾನುವಾರು ಆರೋಗ್ಯ ಶಿಬಿರಗಳನ್ನು ಈಗಾಗಲೇ ನೀಡಿರುವ ಸುತ್ತೋಲೆ ದಿನಾಂಕ 18.03-11ರಂತೆ ಹಾಗೂ 12.01.12ದಿನಾಂಕದ ಸುತ್ತೋಲೆಯಂತೆ ಕಟ್ಟು ನಿಟ್ಟಾಗಿ ಕ್ರಮ ವಹಿಸುವುದು.

ಇದರೊಂದಿಗೆ ಅನುಮೋದಿತ ಘಟಕ ವೆಚ್ಚ(Unit cost) ಪಟ್ಟಿ ಲಗತ್ತಿಸಿದೆ.

**ಅನುಬಂಧ- A (ಜಲಾನಯನ ಭೂ ಉಪಚಾರ ಘಟಕದಡಿಯಲ್ಲಿ)**

| ಕ್ರ. ಸಂ | ಚಟುವಟಿಕೆಗಳು | ಘಟಕ | ಅನುಮೋದಿತ ಘಟಕ ದರ |
|---|---|---|---|
| | **ಮೇವು ಅಭಿವೃದ್ಧಿ ಚಟುವಟಿಕೆಗಳು** | | |
| 1 | 10 ಗುಂಟೆ ಜಮೀನಿನಲ್ಲಿ ಬಹುವಾರ್ಷಿಕ ಮೇವು ಬೆಳೆಸುವುದು | 10ಗುಂಟೆ | ರೂ.2200 |
| 2 | ಬದುಗಳ ಮೇಲೆ ಬಹುವಾರ್ಷಿಕ ಮೇವು ಉತ್ಪಾದನೆ | 1ಚದರ ಮೀ. | ರೂ.4 |
| 3 | ಮೇವು ಸಸ್ಯಕ್ಷೇತ್ರ | 10ಗುಂಟೆ | ರೂ.2200 |

**ಅನುಬಂಧ-B (ಉತ್ಪಾದನಾ ಪದ್ದತಿಗಳು ಮತ್ತು ಕಿರು ಉದ್ದಿಮೆಗಳು)**

| | | | |
|---|---|---|---|
| I | **ಸಮುದಾಯ ಚಟುವಟಿಕೆಗಳು (Community activities)** | | |
| 1 | ಜಾನುವಾರು ಆರೋಗ್ಯ ಶಿಬಿರಗಳು | 1 ಶಿಬಿರ | ರೂ.25,000 |
| 2 | ಟ್ರೆವಿಸ್ ಅಳವಡಿಕೆ | 1 | ರೂ.14,000 |
| II | **ಪ್ರಾತ್ಯಕ್ಷತೆಗಳು (Demonstrations)** | | |
| 1 | ರಸಮೇವು ಗುಂಡಿ | 1 ಗುಂಡಿ | ರೂ.25,700 |
| 2 | ಮೇವಿನ ಕಿರು ಪೊಟ್ಟಣ | 10 ಗುಂಟೆ | ರೂ.500 |
| 3 | ಅಝೋಲ ಉತ್ಪಾದನೆ | (2 ಗುಂಡಿ ಗಳಿಗೆ) | ರೂ.1000 |
| 4 | ವಿದ್ಯುತ್ ಚಾಲಿತ ಮೇವು ಕತ್ತರಿಸುವ ಯಂತ್ರ (2HP) | 1 | ರೂ.22,000 ರಿಂದ 25,000 |
| 5 | ಮಾದರಿ ದನದ ಕೊಟ್ಟಿಗೆ | 1 | ರೂ.16,200 |
| 6 | ಮಾದರಿ ಕುರಿ ದೊಡ್ಡಿ | 1 | ರೂ.23,700 |

**ಯೋಜನೆ ಮತ್ತು ಅನುಷ್ಠಾನ**

1. ಉತ್ಪಾದನಾ ಪದ್ಧತಿಗಳು ಮತ್ತು ಕಿರು ಉದ್ದಿಮೆಗಳ ಅನುಷ್ಠಾನ PIA ಜವಾಬ್ದಾರಿಯಾಗಿರುತ್ತದೆ.
2. ಯೋಜನಾ ಪ್ರದೇಶದಲ್ಲಿ DPR, ಕ್ರಿಯಾ ಯೋಜನೆ ತಯಾರಿಕೆ PIA ಜವಾಬ್ದಾರಿ.
3. ಯೋಜನಾ ಪ್ರದೇಶದಲ್ಲಿನ ಸಂಬಂಧಪಟ್ಟ ಗ್ರಾಮ ಪಂಚಾಯತಿಗೆ ಅನುಮೋದಿತ ಕ್ರಿಯಾ ಯೋಜನೆಯ ಪ್ರತಿಯನ್ನು ನೀಡಿವುದು.
4. ತಯಾರಿಸಲಾದ ಕ್ರಿಯಾ ಯೋಜನೆಯನ್ನು PIA ಅಗತ್ಯವಿದ್ದಲ್ಲಿ ಮರುಪರಿಶೀಲಿಸಿ ಫಲಾನುಭವಿಗಳ ಜೊತೆ ಚರ್ಚಿಸಿ ಮಾರ್ಪಾಡು ಮಾಡಬಹುದು.

**ಫಲಾನುಭವಿಗಳ ಆಯ್ಕೆ:**

ಸಣ್ಣ ರೈತರು, ಅತಿ ಸಣ್ಣ ರೈತರು, ಮಹಿಳಾ ರೈತರು, ಪಜಾ. ಪಪಂ. ರೈತರಿಗೆ ಆದ್ಯತೆ ನೀಡುವುದು. ಜಲಾನಯನ ಸಮಿತಿಯೊಂದಿಗೆ ಸಮಾಲೋಚಿಸಿ ಸಹಭಾಗಿತ್ವದೊಂದಿಗೆ PIA ರವರು ಫಲಾನುಭವಿಗಳನ್ನು ಆಯ್ಕೆ ಮಾಡುವುದು. ಆಯ್ಕೆಯಾದ ಫಲಾನುಭವಿಗಳಿಗೆ ಕೌಶಲ್ಯ ಅಭಿವೃದ್ದಿಗಾಗಿ ಅಗತ್ಯ ತರಬೇತಿಗಳನ್ನು ನೀಡುವುದು.

**ವಂತಿಗೆ: ಯೋಜನೆಯ ಮಾರ್ಗಸೂಚಿಯಂತೆ**

- ಅನುಬಂಧ Bಯಲ್ಲಿನ ಭಾಗ -Iರ ಸಮುದಾಯ ಚಟುವಟಿಕೆಗಳಿಗೆ ವಂತಿಗೆ ಇರುವುದಿಲ್ಲ.
- ಅನುಬಂಧ Bಯಲ್ಲಿನ ಭಾಗ-IIರ ಚಟುವಟಿಕೆಗಳಿಗೆ ವಂತಿಗೆಯನ್ನು ಫಲಾನುಭವಿಗಳಿಂದ ಪಡೆಯುವುದು. ವಂತಿಗೆ ಸಾಮಾನ್ಯರಿಗೆ - 20%, SC /ST ಫಲಾನುಭವಿಗಳಿಗೆ 10%.
- ಪಡೆದ ವಂತಿಗೆಯನ್ನು WDF ಖಾತೆಗೆ ಜಮಾ ಮಾಡುವುದು.

**ಸಾಮಾನ್ಯರಿಗೆ**

ಗರಿಷ್ಠ ವಂತಿಗೆ.

ರೂ. 4800(ಪ್ರತಿ ಹೆಕ್ಟೇರಿಗೆ ಯೋಜನಾ ವೆಚ್ಚರೂ.12,000 ಇದ್ದಲ್ಲಿ)

ರೂ. 6000 (ಪ್ರತಿ ಹೆಕ್ಟೇರಿಗೆ ಯೋಜನಾ ವೆಚ್ಚರೂ.15,000 ಇದ್ದಲ್ಲಿ)

**ಪಜಾ. ಪಪಂ. ರವರಿಗೆ**

ಗರಿಷ್ಠ ವಂತಿಗೆ

ರೂ. 2400 (ಪ್ರತಿ ಹೆಕ್ಟೇರಿಗೆ ಯೋಜನಾ ವೆಚ್ಚರೂ.12,000 ಇದ್ದಲ್ಲಿ)

ರೂ.3000 (ಪ್ರತಿ ಹೆಕ್ಟೇರಿಗೆ ಯೋಜನಾ ವೆಚ್ಚರೂ.15,000 ಇದ್ದಲ್ಲಿ)

**ಅನುದಾನ:**

ಉತ್ಪಾದನಾ ಪದ್ದತಿಗಳ ಚಟುವಟಿಕೆಗಳಿಗೆ, ಯೋಜನಾ ವೆಚ್ಚದ ಗರಿಷ್ಠ ಮೊತ್ತದ ಇಮ್ಮಡಿ (ಎರಡರಷ್ಟು) ಮಾತ್ರ (ಪ್ರತಿ ಹೆಕ್ಟೇರಿಗೆ ಯೋಜನಾ ವೆಚ್ಚರೂ.12,000 ಇದ್ದಲ್ಲಿ ರೂ.24,000) (ಪ್ರತಿ ಹೆಕ್ಟೇರಿಗೆ ಯೋಜನಾ ವೆಚ್ಚರೂ.15,000 ಇದ್ದಲ್ಲಿ ರೂ.30.000) ನೀಡಲಾಗುವುದು.

**ವಂಟಿನ ಬಿಡುಗಡೆ :**

EC,PIA & DWDO ಕಛೇರಿಯ ತಾಂತ್ರಿಕ ಅಧಿಕಾರಿಯನ್ನು ಒಳಗೊಂಡ ತಂಡವನ್ನು ರಚಿಸಬೇಕು. ಅರ್ಹ ಫಲಾನುಭವಿಗ ಳಿಂದ ಸ್ವೀಕರಿಸಿದ ಅರ್ಜಿಗಳನ್ನು ಈ ತಂಡವು ಪರಿಶೀಲಿಸಿ ಅನುಮೋದಿಸುವುದು. ಅನುಮೋದಿತ ಫಲಾನುಭವಿಗಳ ಖಾತೆಗೆ ಚೆಕ್ ನ್ನು ನೀಡುವುದು.

**ಸಾಮರ್ಥ್ಯ ಬಲವರ್ಧನೆ :**

ಇದಕ್ಕಾಗಿ ಬೇಕಾಗಿರುವ ಅನುದಾನವನ್ನು ಕ್ರಿಯಾ ಯೋಜನೆಯಲ್ಲಿಯೇ ಸೇರಿಸುವುದು.ಫಲಾನುಭವಿಗಳ ಬೇಡಿಕೆಗೆ ಅನುಗುಣವಾಗಿ ತರಬೇತಿಗಳನ್ನು ನೀಡುವುದು. ಈ ತರಬೇತಿಗಳು ಕೇವಲ ಮಾಹಿತಿ ಮತ್ತು ಅರಿವು ಮೂಡಿಸುವುದು ಅಷ್ಟೆ ಅಲ್ಲದೆ ಕೌಶಲ್ಯಗಳನ್ನು ವೃದ್ಧಿಸುವಂತಿರಬೇಕು.

ಸಾಮರ್ಥ್ಯ ವೃದ್ಧಿಗಾಗಿ ಬೇಕಾಗಿರುವ ಅನುದಾನವನ್ನು ಯೋಜನೆಯಲ್ಲಿ ಲಭ್ಯವಿರುವ 5% (ಸಾಂಸ್ಥಿಕ ಮತ್ತು ಸಾಮರ್ಥ್ಯ ವೃದ್ಧಿ ಶೀರ್ಷಿಕೆ) ಬಳಸಿಕೊಳ್ಳುವುದು. ಸಾಮರ್ಥ್ಯ ಬಲವರ್ಧನೆಯಲ್ಲಿ ಯಶಸ್ವಿ ಸಮಗ್ರ ಕೃಷಿ ಪದ್ದತಿಗಳ ಕ್ಷೇತ್ರ ಭೇಟಿ ಮತ್ತು ಪ್ರಾತ್ಯಕ್ಷತೆಗಳನ್ನು ಒಳಗೊಂಡಿರಬೇಕು.

**ಆಯುಕ್ತರು,**
**ಜಲಾನಯನ ಅಭಿವೃದ್ಧಿ ಇಲಾಖೆ,**
**ಬೆಂಗಳೂರು.**

ಪ್ರತಿಯನ್ನು:

1. ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು
2. ಮುಖ್ಯ ಲೆಕ್ಕಾಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
3. ಆಯುಕ್ತರ ಆಪ್ತ ಶಾಖೆ.
4. ನಿರ್ದೇಶಕರ ಆಪ್ತ ಶಾಖೆ.
5. ಜಂಟಿ ನಿರ್ದೇಶಕರು(ಕೃಷಿ ಶಾಸ್ತ್ರ)
6. ಎಲ್ಲಾ ನೋಡಲ್ ಅಧಿಕಾರಿಗಳಿಗೆ.
7. ಉಪನಿರ್ದೇಶಕರು, ಜಲಾನಯನ ಕೋಶ
8. ಎಲ್ಲಾ ಜಿಲ್ಲೆಗಳ ಸಹಾಯಕ ನಿರ್ದೇಶಕರು (ಪ.ಸಂ)/ ಜಾನುವಾರು ವಿಸ್ತರಣಾಧಿಕಾರಿಗಳು ಅಗತ್ಯ ಕ್ರಮಕ್ಕಾಗಿ.

ಕರ್ನಾಟಕ ಸರ್ಕಾರ

ಸಂ:ಜಅಇ/ಜಾವಿ/IWMP/2011-12

ಆಯುಕ್ತರ ಕಾರ್ಯಾಲಯ
ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ, ಕ.ಗೃ.ಮಂ.ಕಟ್ಟಡ,ಕಾವೇರಿ ಭವನ
ಕೆಂಪೇಗೌಡ ರಸ್ತೆ, ಬೆಂಗಳೂರು-560009
ದಿನಾಂಕ:03/12/2011

# ಸುತ್ತೋಲೆ:V-3/11-12

ವಿಷಯ:-IWMP-Batch-I ಅಡಿಯಲ್ಲಿ ಜಾನುವಾರುಗಳುಳ್ಳ ರೈತರಿಗೆ/ರೈತಮಹಿಳೆಯರಿಗೆ (Target Livestock Farmers-TLF) ಗ್ರಾಮ ಮಟ್ಟದ ತರಬೇತಿಗಳನ್ನು (VBTs) ನಡೆಸುವ ಬಗ್ಗೆ.

******

IWMP Batch-Iಅಡಿಯಲ್ಲಿ PERT Chart ನಂತೆ ಜಾನುವಾರುಗಳುಳ್ಳ ರೈತರಿಗೆ ಜಾನುವಾರುಗಳಲ್ಲಿ ಉತ್ಪಾದನೆ ಹೆಚ್ಚಿಸಲು ಗ್ರಾಮ ಮಟ್ಟದ ತರಬೇತಿಗಳನ್ನು ಏರ್ಪಡಿಸಬೇಕಾಗಿದೆ. ಈಗಾಗಲೇ ರಚಿಸಿರುವ ಬಳಕೆದಾರರ ಗುಂಪುಗಳಲ್ಲಿ ಜಾನುವಾರುಗಳುಳ್ಳ ರೈತರಿಗೆ ಜಾನುವಾರುಗಳ ನಿರ್ವಹಣೆ ಮತ್ತು ಪಾಲನೆ ಕುರಿತು ಕೌಶಲ್ಯಗಳನ್ನು ಹೆಚ್ಚಿಸಲು, ವೈಜ್ಞಾನಿಕ ರೀತಿಯಲ್ಲಿ ಜಾನುವಾರುಗಳ ಸಾಕಾಣಿಕೆ, ಮೇವು ಅಭಿವೃದ್ಧಿ, ಸಮರ್ಪಕ ಮೇವು ಬಳಕೆ, ಕರು ಗಳ ಪಾಲನೆ, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಬಗ್ಗೆ ಹಾಗು ಕುರಿ, ಮೇಕೆ, ಕೋಳಿ, ಹಂದಿ, ಮೊಲ ಸಾಕಾಣಿಕೆ ಬಗ್ಗೆ ಒಂದು ದಿನದ ತರಬೇತಿಯನ್ನು ಗ್ರಾಮಮಟ್ಟದಲ್ಲಿ ಏರ್ಪಡಿಸಬೇಕು.

ಈ ತರಬೇತಿಗಳನ್ನು ಸರ್ಕಾರೇತರ ಸಂಸ್ಥೆಯ ತಂಡದ ನಾಯಕ, IGA ಪರಿಣಿತರು ಕಾರ್ಯಕಾರಿ ಸಮಿತಿ ಯವರ (E.C.)ಸಹಕಾರದೊಂದಿಗೆ ಏರ್ಪಡಿಸಬೇಕು.ಸದರಿ ತರಬೇತಿಗಳನ್ನು ಏರ್ಪಡಿಸಲು ತಾಲ್ಲೂಕು ಜಲಾನಯನ ತಂಡದವರು ಸಕ್ರಿಯವಾಗಿ ಪಾಲ್ಗೊಳ್ಳಬೇಕು.ಜಲಾನಯನ ಸಹಾಯಕರು ಈ ತರಬೇತಿಗಳ ಅನುಷ್ಠಾನಕ್ಕಾಗಿ ಶ್ರಮಿಸಬೇಕು. ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ನಿರ್ದೇಶಕರು(ಪ.ಸಂ)/ಜಾನುವಾರು ವಿಸ್ತರಣಾಧಿಕಾರಿಗಳು (LEOs) ಈ ತರಬೇತಿಗಳನ್ನು ಏರ್ಪಡಿಸುವ ಬಗ್ಗೆ ಯೋಜನೆ ತಯಾರಿಸಲು(plan preparation)ಹಾಗು ತರಬೇತಿ ದಿನಾಂಕಗಳನ್ನು ನಿಗದಿ ಪಡಿಸಲು ಅಗತ್ಯ ಸಲಹೆ, ಸೂಚನೆ ಮತ್ತು ಮಾರ್ಗದರ್ಶನ ನೀಡಬೇಕು.

ತಾಂತ್ರಿಕ ಉಪನ್ಯಾಸ ನೀಡುವುದರ ಜೊತೆಗೆ ಒಣ ಮೇವು ಪೌಷ್ಠೀಕರಣ, ಅಜೋಲ್ಲ ಉತ್ಪಾದನೆ ಮೇವು ಕತ್ತರಿಸುವ ಯಂತ್ರದ ಬಳಕೆಯ ಬಗ್ಗೆ ,ವಿವಿಧ ಮೇವು ಬೆಳೆಗಳ ಬೇರುಗಳು,ಕಾಂಡಗಳು, ಮೇವಿನ ಬೀಜಗಳನ್ನು ಸಂಗ್ರಹಿಸಿ ಸಣ್ಣ ಪ್ರಮಾಣದಲ್ಲಿ ಪ್ರಾತ್ಯಕ್ಷತೆಯನ್ನು ತರಬೇತಿ ನೀಡುವ ಸ್ಥಳದಲ್ಲಿಯೇ ಏರ್ಪಡಿಸುವುದು. ಈ ಪ್ರಾತ್ಯಕ್ಷತೆಗಳನ್ನು ಸ್ಥಳೀಯ ಪಶುವೈದ್ಯರ ಸಹಕಾರದೊಂದಿಗೆ ಏರ್ಪಡಿಸುವುದು.ಇದರಿಂದ ಅಭ್ಯರ್ಥಿಗಳಲ್ಲಿ ಆಸಕ್ತಿ ಹೆಚ್ಚಾಗಿ ಕಲಿಕೆಮಟ್ಟ ಹೆಚ್ಚುವುದು .

ಒಂದು ತಂಡದಲ್ಲಿ 50 ಜನ ರೈತರಿಗೆ/ರೈತ ಮಹಿಳೆಯರಿಗೆ ಗ್ರಾಮ ಮಟ್ಟದ ತರಬೇತಿಗಳನ್ನು (VBT) ಗ್ರಾಮ ಮಟ್ಟದಲ್ಲಿಯೇ ಸೂಕ್ತ ಸ್ಥಳದಲ್ಲಿ ಏರ್ಪಡಿಸುವುದು. ಪ್ರತಿಯೊಬ್ಬ ಅಭ್ಯರ್ಥಿಗೆ(ರೈತರಿಗೆ/ರೈತ ಮಹಿಳೆಯರಿಗೆ) ಬೆಳಿಗ್ಗೆ ಕಾಫಿ/ಟೀ, ಮದ್ಯಾಹ್ನ ಉಪಹಾರ ನೀಡಲು ಒಟ್ಟು ವೆಚ್ಚ ರೂ.65/- ಭರಿಸುವುದು.ಯೋಜನೆಗೆ ಸಂಬಂಧಿಸಿದ ಹಾಗು ತರಬೇತಿಯ ಮಾಹಿತಿಯುಳ್ಳ ಬ್ಯಾನರನ್ನು ಬರೆಸಬೇಕು.ತರಬೇತಿಯಲ್ಲಿ ಅವಶ್ಯವಿರುವ Poster and chartಗಳನ್ನು ಬಳಸಿ ಉಪನ್ಯಾಸ ನೀಡಿದರೆ ಕಲಿಕೆ ಮಟ್ಟ ಹೆಚ್ಚುವುದು.

ಒಂದು ದಿನದ ಗ್ರಾಮಮಟ್ಟದ ತರಬೇತಿಗಳಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ಪಶುವೈದ್ಯಾಧಿಕಾರಿ / ಸಹಾಯಕ ನಿರ್ದೇಶಕರು/ವಿಸ್ತರಣಾಧಿಕಾರಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಉಪನ್ಯಾಸ

ನೀಡುವಂತೆ ವ್ಯವಸ್ಥೆ ಮಾಡುವುದು.ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ ರೂ.350-00 ನೀಡುವುದು. ಈ ತರಬೇತಿ ಗಳಲ್ಲಿ ಸಾಧ್ಯವಿರುವ ಕಡೆ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ನಿರ್ದೇಶಕರು (ಪ.ಸಂ)/ಜಾನುವಾರು ವಿಸ್ತರಣಾಧಿಕಾರಿಗಳು L.E.O ರವರೂ ಸಹಾ ತರಬೇತಿ ನೀಡತಕ್ಕದ್ದು. ಗ್ರಾಮ ಮಟ್ಟದ ತರಬೇತಿ ಗಳ (VBTs) ವೆಚ್ಚಗಳನ್ನು Institution and capacity Building ಅಡಿಯಲ್ಲಿ ಭರಿಸುವುದು .

ತರಬೇತಿಗಳ ಆಂತರಿಕ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಕಾರ್ಯವನ್ನು ಸಹಾಯಕ ನಿರ್ದೇಶಕರು(ಪ.ಸಂ)/ ಜಾನುವಾರು ವಿಸ್ತರಣಾಧಿಕಾರಿಗಳು( LEOs) ನಿರ್ವಹಿಸುವರು.

**ನಿರ್ದೇಶಕರು**
**ಜಲಾನಯನ ಅಭಿವೃದ್ಧಿ ಇಲಾಖೆ**
**ಬೆಂಗಳೂರು.**

ಪ್ರತಿಗಳು:

1. ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳಿಗೆ, ಅಗತ್ಯ ಕ್ರಮಕ್ಕಾಗಿ.
2. ಕೇಂದ್ರ ಕಛೇರಿಯ ಎಲ್ಲಾ ಘಟಕದ ಮುಖ್ಯಸ್ಥರಿಗೆ .ಮಾಹಿತಿಗಾಗಿ
3. ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ನಿರ್ದೇಶಕರು (ಪ.ಸಂ)/ಜಾನುವಾರು ವಿಸ್ತರಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

## ಕರ್ನಾಟಕ ಸರ್ಕಾರ

ಸಂಖ್ಯೆ:ಜಅಇ/ಪಸಂ/ಘ ವೆ/2011-12

ಆಯುಕ್ತರ ಕಛೇರಿ
ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ, ಕರ್ನಾಟಕ ಗೃಹ ಮಂಡಳಿ
ಕಾವೇರಿ ಭವನ, ಕೆಂಪೇಗೌಡ ರಸ್ತೆ
ಬೆಂಗಳೂರು, ದಿನಾಂಕ: 02.07.2011

# ಸುತ್ತೋಲೆ:V-2/11-12

ವಿಷಯ: ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಜಾನುವಾರು ಚಟುವಟಿಕೆಗಳ ಘಟಕ ವೆಚ್ಚಪಟ್ಟಿಗಳನ್ನು ಅನುಮೋದಿಸಿರುವ ಬಗ್ಗೆ.

-0-

ಜಲಾನಯನ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳಲ್ಲಿ ಜಾನುವಾರುಗಳ ಅಭಿವೃದ್ಧಿಗಾಗಿ ಹಲವಾರು ಮೇವು ಅಭಿವೃದ್ಧಿ ಚಟುವಟಿಕೆಗಳನ್ನು ಅನುಷ್ಠಾನ ಮಾಡಬೇಕಾಗಿದೆ.ಮೇವು ಅಭಿವೃದ್ಧಿಗೆ ಸಂಭಂದಿಸಿದ 6 ಚಟುವಟಿಕೆ ಗಳ ಘಟಕ ವೆಚ್ಚ ಪಟ್ಟಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ..

ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ,
ಬೆಂಗಳೂರು.

**ಪತ್ರಿಗಳನ್ನು:**

1. ಎಲ್ಲಾ ಜಿಲ್ಲೆಗಳ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು.
2. ಸಹಾಯಕ ನಿರ್ದೇಶಕರು (ಪ.ಸಂ)/ ಜಾನುವಾರು ವಿಸ್ತರಣಾಧಿಕಾರಿಗಳು (LEOs).
3. ಕೇಂದ್ರ ಕಛೇರಿಯ ಎಲ್ಲ ಘಟಕದ ಮುಖ್ಯಸ್ಥರುಗಳು.
4. ಪ್ರಾಂಶುಂಪಾಲರು ಹಾಗೂ ಉಪ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ತರಬೇತಿ ಕೇಂದ್ರ ಬಿಜಾಪುರ / ಮೈಸೂರು.
5. ಆಯುಕ್ತರ ಆಪ್ತ ಶಾಖೆ, ಜಲಾನಯನ ಅಭಿವೃದ್ಧಿ ಇಲಾಖೆ.
6. ನಿರ್ದೇಶಕರ ಆಪ್ತಶಾಖೆ, ಜಲಾನಯನ ಅಭಿವೃದ್ಧಿ ಇಲಾಖೆ.

**ಜಾನುವಾರು ಘಟಕ**

**ಮೇವು ಅಭಿವೃದ್ಧಿ ಚಟುವಟಿಕೆಗಳ ಘಟಕ ವೆಚ್ಚಗಳು**

**ಉದ್ದೇಶ**

- ಜಾನುವಾರುಗಳಿಗೆ ವರ್ಷವಿಡೀ ಹಸಿರು ಮೇವನ್ನು ನೀಡಲು.

- ಜಾನುವಾರುಗಳ ಆರೋಗ್ಯ ಸುಧಾರಣೆಗಾಗಿ.
- ಜಾನುವಾರುಗಳಲ್ಲಿ ಉತ್ಪಾದಕತೆ ಹಾಗೂ ಉತ್ಪಾದನೆ ಹೆಚ್ಚಳಕ್ಕಾಗಿ.
- ಜಾನುವಾರುಗಳಲ್ಲಿ ಉತ್ಪಾದನಾ ವೆಚ್ಚ ಕಡಿಮೆ ಮಾಡಲು.

**1) 10 ಗುಂಟೆ ಪ್ರದೇಶದಲ್ಲಿ ಸುಧಾರಿತ ಬಹುವಾರ್ಷಿಕ ಮೇವು ಬೆಳೆಸುವುದು:**

| | | |
|---|---|---|
| 1 | ಕೊಟ್ಟಿಗೆ ಗೊಬ್ಬರ - 1 ಘ ಮೀ. ರೂ. 550-00 ರಂತೆ, 2 ಘ.ಮೀ.ಗೆ | ರೂ. 1100.00 |
| 2 | ಮೇವಿನ ಬೇರು ಖರೀದಿ (5000 ಮೇವಿನ ಬೇರುಗಳು) *(ಒಂದು ಮೇವಿನ ಬೇರಿಗೆ ರೂ. 0.10 ರಂತೆ) | ರೂ . 500.00 |
| 3 | ಮೇವಿನ ಬೇರು ಸಾಗಿಸುವ ಖರ್ಚು | ರೂ. 300.00 |
| 4 | ರಾಸಾಯನಿಕ ಗೊಬ್ಬರಗಳ ಖರೀದಿ ವೆಚ್ಚ (ಮೂಲ ಗೊಬ್ಬರ) | ರೂ. 300.00 |
| | ಒಟ್ಟು | ರೂ.2200.00 |

**ಸೂಚನೆ:** 1.ಸಾಲಿನಿಂದ ಸಾಲಿಗೆ 2 ಅಡಿ ಅಂತರ, ಬೇರಿನಿಂದ ಬೇರಿಗೆ 1 ಅಡಿ ಅಂತರ - ರೋಡ್ಸ್/ಗಿನಿ / ಸಿಗ್ನಲ್ /ಎನ್ ಬಿ 21/ ಕೋ1/ ಕೋ2/ಕೋ3/ಕೋ 63 ಇತ್ಯಾದಿ.(ಸ್ಥಳೀಯ ಹವಾಗುಣಕ್ಕೆ ಹೊಂದಿಕೊಳ್ಳುವ ತಳಿಗಳನ್ನು ಆಯ್ಕೆ ಮಾಡುವುದು)

*ಬಹು ವಾರ್ಷಿಕ ಮೇವಿನ ಬೇರುಗಳನ್ನು ಯಾವುದೇ ಪಶುಸಂಗೋಪನೆ ಕ್ಷೇತ್ರಗಳಿಂದ/ ಕೇಂದ್ರ ಸರ್ಕಾರದ ಕೇಂದ್ರೀಯ ಮೇವು ಬೀಜ ಉತ್ಪಾದನಾ ಕ್ಷೇತ್ರ ಹೆಸರಘಟ್ಟ,ಬೆಂಗಳೂರು /ಕರ್ನಾಟಕ ಹಾಲು ಒಕ್ಕೂಟಗಳು /ಪಶು ವೈದ್ಯಕೀಯ ಕಾಲೇಜುಗಳು /ಕೃಷಿ ವಿಶ್ವ ವಿದ್ಯಾನಿಲಯಗಳು/ಕೃಷಿ ವಿಸ್ತರಣಾ ಕೇಂದ್ರಗಳು/ ಸ್ಥಳೀಯ ಪ್ರಗತಿಪರ ರೈತರಿಂದ ಖರೀದಿಸಬಹುದು.

**ಸೂಚನೆ:**ರೈತನ ಹೆಸರು, ಮೇವು ಬೆಳೆ ವಿವರ, ಭೂಮಿಯ ಸರ್ವೆ ಸಂಖ್ಯೆಯನ್ನು ದಾಖಲಿಸಬೇಕು. ನೂತನವಾಗಿ ಸ್ಥಾಪಿಸುವ ತಾಕುಗಳಿಗೆ ಮಾತ್ರ ಅರ್ಹತೆ ಇರುವುದು. ಈಗಾಗಲೆ ಸ್ಥಾಪಿಸಿರುವ ತಾಕುಗಳಿಗೆ ಅರ್ಹತೆ ಇರುವುದಿಲ್ಲ.

**2) ಬೆಳೆ ಅಂಚಿನಲ್ಲಿ ಸುಧಾರಿತ ಬಹುವಾರ್ಷಿಕ ಮೇವು ಬೆಳೆಸುವುದು:**

**ಉದ್ದೇಶ:** ಕಡಿಮೆ ಜಮೀನುಳ್ಳ ರೈತರು ಸಹ ಹಸಿರು ಮೇವು ಉತ್ಪಾದಿಸಲು .

- ದ್ವಿದಳ ಮೇವು ಸಹ ಬೆಳೆಯಲು.

| ಕ್ರ.ಸಂ. | ವಿವರಗಳು | ಮೊತ್ತ ರೂ. |
|---|---|---|
| 1 | ಕೊಟ್ಟಿಗೆ ಗೊಬ್ಬರ - 1 ಘ ಮೀ. ರೂ. 550-00 ರಂತೆ, 2 ಘ.ಮೀ.ಗೆ | ರೂ.1100.00 |
| 2 | ರೋಡ್ಸ/ಅಂಜನ್/ಸಿಗ್ನಲ್ /ಗಿನಿ ಇತ್ಯಾದಿ 5000 ಮೇವಿನ ಬೇರುಗಳನ್ನು 3 ಸಾಲು ಗಳಲ್ಲಿ(0.3 ಮೀ X0.6ಮೀ ಅಂತರದಲ್ಲಿ) 1000 ಮೇವಿನ ಬೇರುಗಳಿಗೆ ರೂ.100-00 ರಂತೆ( ಒಟ್ಟು 500 ಮೀಟರ್ ಉದ್ದ) | 500.00 |
| 3 | ಒಂದು ಸಾಲಿನಲ್ಲಿ 1 KG ದ್ವಿದಳ ಮೇವಿನ ಬೀಜ ಬಿತ್ತಲು(ಒಂದು ಕೆ.ಜಿ.ಗೆ ರೂ.50-00 ರಂತೆ) | 50.00 |
| 4 | ಮೇವಿನ ಬೇರು ಸಾಗಿಸುವ ಖರ್ಚು | 300.00 |
| 5 | ರಾಸಾಯನಿಕ ಗೊಬ್ಬರಗಳ ಖರೀದಿ ವೆಚ್ಚ(ಮೂಲ ಗೊಬ್ಬರ) | 300.00 |
| | **ಒಟ್ಟು** | **2250.00** |

**3)ಬದುಗಳ ಮೇಲೆ ಬಹು ವಾರ್ಷಿಕ ಮೇವು ಬೆಳೆಯುವುದು (ರೋಡ್ಸ್/ ಕಾಂಗೊ ಸಿಗ್ನಲ್/ಗಿನಿ ಇತ್ಯಾದಿ**

**ಉದ್ದೇಶ:**

- ಬದುಗಳ ಸ್ಥಿರತೆಗಾಗಿ.

- ಸಮುದಾಯದ ಜಮೀನಿನಲ್ಲಿ ಸಹ ಮೇವು ಉತ್ಪಾದಿಸಲು.

| | |
|---|---|
| Root slips to be planted at ½ feet distance on Bunds ( 36 root slips per square meter) @ Rs.0.10 per root slip and Rs.0.04 for transport and cost of planting) Rs.4.00 per sqmt.<br>ಮೇವಿನ ಬೇರುಗಳನ್ನು ½ ಅಡಿ ಅಂತರದಲ್ಲಿ ಬದುಗಳ ಮೇಲೆ ನೆಡಲು ( ಒಂದು ಚದರ ಮೀಟರ್ ಜಾಗದಲ್ಲಿ 36 ಬೇರುಗಳನ್ನು ನೆಡುವುದು). ಒಂದು ಬೇರಿಗೆ ರೂ.0.10 ರಂತೆ ಖರೀದಿ ವೆಚ್ಚ ಆಗುವುದು. ಬೇರುಗಳನ್ನು ಸಾಗಿಸಲು ಮತ್ತು ನೆಡುವ ವೆಚ್ಚ ಸೇರಿ ಒಂದು ಚದರ ಮೀಟರ್‌ಗೆ ರೂ.4.00 ವೆಚ್ಚ ಆಗುವುದು) | **Rs 4.00 per sq mtr**. |

**4) ಮೇವು ಸಸ್ಯ ಕ್ಷೇತ್ರ (FODDER NURSERY)**

**ಉದ್ದೇಶ:**ಬಹುವಾರ್ಷಿಕ ಮೇವಿನ ಬೇರುಗಳನ್ನು ಸ್ಥಳೀಯವಾಗಿ ಲಭ್ಯವಾಗುವಂತೆ ಹಾಗು ರೈತರಿಗೆ ಸರಬರಾಜು ಮಾಡಲು ಮೇವು ಸಸ್ಯ ಕ್ಷೇತ್ರಗಳನ್ನು (FODDER NURSERY) ಸ್ಥಾಪಿಸಬೇಕಾಗಿರುತ್ತದೆ.

10 ಗುಂಟೆ ಪ್ರದೇಶದಲ್ಲಿ 2.5 X 4.5ಮೀ. ಅಳತೆಯ 6 ತಾಕುಗಳಲ್ಲಿ ವಿವಿಧ ಸುಧಾರಿತ ಬಹುವಾರ್ಷಿಕ ಮೇವು ಬೆಳೆಯಲು. (5000 ಮೇವಿನ ಬೇರುಗಳು ಬೇಕಾಗಿರುತ್ತವೆ)

| | | |
|---|---|---|
| 1 | ಕೊಟ್ಟಿಗೆ ಗೊಬ್ಬರ - 1 ಘ ಮೀ. ರೂ. 550-00 ರಂತೆ, 2 ಘ.ಮೀ.ಗೆ | ರೂ. 1100.00 |
| 2 | ಮೇವಿನ ಬೇರುಗಳ ಖರೀದಿ (5000 ಮೇವಿನ ಬೇರುಗಳು) *(ಒಂದು ಮೇವಿನ ಬೇರಿಗೆ ರೂ. 0.10 ರಂತೆ) | ರೂ . 500.00 |
| 3 | ಮೇವಿನ ಬೇರುಗಳನ್ನು ಸಾಗಿಸುವ ಖರ್ಚು | ರೂ. 300.00 |
| 4 | ರಾಸಾಯನಿಕ ಗೊಬ್ಬರಗಳ ಖರೀದಿ ವೆಚ್ಚ (ಮೂಲ ಗೊಬ್ಬರ) | ರೂ. 300.00 |
| | ಒಟ್ಟು | ರೂ.2200.00 |

**5) ಮೇವಿನ ಕಿರುಪೊಟ್ಟಣ:** 10 ಗುಂಟೆಯಲ್ಲಿ ವಾರ್ಷಿಕ ಏಕದಳ/ದ್ವಿದಳ ಮೇವು ಬೆಳೆಸಲು

**ಮಾದರಿ - I**

| | |
|---|---|
| ATM ( ಆಫ್ರಿಕನ್ ಮೇವಿನ ಜೋಳ) 5 ಕಿಲೊ. (ಒಂದು ಕಿಲೊಗೆ ರೂ 30/- ರಂತೆ) | ರೂ.150.00 |
| ರಾಸಾಯನಿಕ ಗೊಬ್ಬರಗಳ ವೆಚ್ಚ | ರೂ.300.00 |
| **ಒಟ್ಟು** | **ರೂ.450.00** |

**ಮಾದರಿ - II**

| | |
|---|---|
| ATM ( ಆಫ್ರಿಕನ್ ಮೇವಿನ ಜೋಳ) 3 ಕಿಲೊ. (ಒಂದು ಕಿಲೊಗೆ ರೂ 30/- ರಂತೆ) | ರೂ.90.00 |
| ಮೇವಿನ ಅಲಸಂದೆ 2 ಕಿಲೊ (ಒಂದು ಕಿಲೊಗೆ ರೂ.50/- ರಂತೆ) | ರೂ.100.00 |
| ರಾಸಾಯನಿಕ ಗೊಬ್ಬರಗಳ ವೆಚ್ಚ | ರೂ.300.00 |
| **ಒಟ್ಟು** | **ರೂ.490.00** |

**ಮಾದರಿ - III**

| | |
|---|---|
| MP Chari (ಮೇವಿನ ಜೋಳ) 4 ಕಿಲೊ. (ಒಂದು ಕಿಲೊಗೆ ರೂ 30/- ರಂತೆ) | ರೂ.120.00 |

| | |
|---|---|
| ಮೇವಿನ ಅಲಸಂದೆ 2 ಕಿಲೊ (ಒಂದು ಕಿಲೊಗೆ ರೂ.50/- ರಂತೆ) | ರೂ.100.00 |
| ರಾಸಾಯನಿಕ ಗೊಬ್ಬರಗಳ ವೆಚ್ಚ | ರೂ.300.00 |
| **ಒಟ್ಟು** | **ರೂ.520.00** |

**6) ಅರ್ಝೋಲ ಉತ್ಪಾದನೆ:**

ಘಟಕ ವೆಚ್ಚ: ರೂ.1000/– 2 ಗುಣಿಗೆ (ಪ್ರತಿ ಗುಣಿಗೆ ರೂ.500/–)

**ಘಟಕ ವಿವರ: (ಒಂದು ಗುಣಿಗೆ)**

| ಕ್ರಮ ಸಂ. | ವಿವರ | ಅಳತೆ | ಧರ | ಮೊತ್ತ |
|---|---|---|---|---|
| 1 | ಗುಣಿ ಅಗೆಯುವ ವೆಚ್ಚ | 3 ಮೀ. ಉದ್ದ 2 ಮೀ. ಅಗಲ, 0.45 ಮೀ. ಆಳ (2.7 ಚ.ಮೀ.) | 1 ಚ.ಮೀ. ಗೆ ರೂ.58.60 ರಂತೆ | 158.22 |
| 2 | ಪಾಲಿಥೀನ್ ಹಾಳೆಯ ಖರೀದಿ ವೆಚ್ಚ | 4 ಮೀ. ಉದ್ದ, 3 ಮೀ ಅಗಲ, (12 ಚ.ಮೀ.) | 1 ಚ.ಮೀ.ಗೆ ರೂ.20 ರಂತೆ | 240.00 |
| 3 | ನೈಲಾನ್ ಪರದೆ ಖರೀದಿ ವೆಚ್ಚ | 4 ಮೀ. ಉದ್ದ 3 ಮೀ ಅಗಲ, (12 ಚ.ಮೀ.) | 1 ಚ.ಮೀ.ಗೆ ರೂ.7ರಂತೆ | 84.00 |
| 4 | ಸೂಪರ್ ಫಾಸ್ಫೇಟ್ ಗೊಬ್ಬರದ ವೆಚ್ಚ | 2ಕಿಲೊ | 1 ಕಿಲೊಗೆ ರೂ.10 ರಂತೆ | 20.00 |
| | | **ಒಟ್ಟು** | | **502.22** |
| | | **Rounded off to** | | **500.00** |

**ಸಮರ್ಥನೆ:** ಹೆಚ್ಚು ಪೌಷ್ಠಿಕಾಂಶವುಳ್ಳ (ಸಸಾರಜನಕ, ಜೀವ ಸತ್ವಗಳು ಮತ್ತು ಖನಿಜಾಂಶಗಳು) ಹಸಿರು ಮೇವು ಉತ್ಪಾದಿಸಲು. ಜಾನುವಾರುಗಳಲ್ಲಿ ಉತ್ಪಾದಕತೆ ಹಾಗೂ ಉತ್ಪಾದನೆ ಹೆಚ್ಚಳಕ್ಕಾಗಿ.

**ವಿ.ಸೂ.** ಬಹು ವಾರ್ಷಿಕ ಮೇವಿನ ಬೇರುಗಳನ್ನು ಯಾವುದೇ ಪಶುಸಂಗೋಪನೆ ಕ್ಷೇತ್ರಗಳಿಂದ/ ಕೇಂದ್ರ ಸರ್ಕಾರದ ಕೇಂದ್ರೀಯ ಮೇವು ಬೀಜ ಉತ್ಪಾದನಾ ಕ್ಷೇತ್ರ ಹೆಸರಘಟ್ಟ, ಬೆಂಗಳೂರು / ಕರ್ನಾಟಕ ಹಾಲು ಒಕ್ಕೂಟಗಳು / ಪಶು ವೈದ್ಯಕೀಯ ಕಾಲೇಜುಗಳು / ಕೃಷಿ ವಿಶ್ವ ವಿದ್ಯಾನಿಲಯಗಳು / ಕೃಷಿ ವಿಸ್ತರಣಾ ಕೇಂದ್ರಗಳು ನಿಗದಿಪಡಿಸಿದ ಧರಗಳಂತೆ ಖರೀದಿಸಬಹುದು. **ಮೇವಿನ ಬೇರುಗಳ ಖರೀದಿ ಬೆಲೆ ಹೆಚ್ಚಾದಲ್ಲಿ ಘಟಕ ವೆಚ್ಚವು ಸಹ ಅನುಕ್ರಮವಾಗಿ ಹೆಚ್ಚಾಗುವುದು.**

**ಆಯುಕ್ತರು**
**ಜಲಾನಯನ ಅಭಿವೃದ್ಧಿ ಇಲಾಖೆ**
**ಬೆಂಗಳೂರು**

ಕರ್ನಾಟಕ ಸರ್ಕಾರ

ಜಲಾನಯನ ಅಭಿವೃದ್ಧಿ ಇಲಾಖೆ

ಸಂ/ಜಅಇ/ಜಾವಿ/TOT/2011-12

ಆಯುಕ್ತರ ಕಾರ್ಯಾಲಯ
ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ,ಕ.ಗೃ.ಮಂ.ಕಟ್ಟಡ,ಕಾವೇರಿ ಭವನ
ಕೆಂಪೇಗೌಡ ರಸ್ತೆ, ಬೆಂಗಳೂರು - 560 009
ದಿನಾಂಕ:24.06.2011

## ಸುತ್ತೋಲೆ:V-1/11-12

**ವಿಷಯ:** IWMP ಯೋಜನೆಯಡಿಯಲ್ಲಿ ಜಾನುವಾರು ಘಟಕದ ಅಡಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಒಂದು ದಿನದ ತರಬೇತಿದಾರರಿಗೆ ತರಬೇತಿ (TOT) ಕಾರ್ಯಾಗಾರಗಳನ್ನು ನಡೆಸುವ ಬಗ್ಗೆ:

**ಉಲ್ಲೇಖ:** ದಿನಾಂಕ 9.2.2011 ರಂದು ನಿರ್ದೇಶಕರು ಜಲಾನಯನ ಅಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಜಾನುವಾರು ಘಟಕದ ತಾಂತ್ರಿಕ ಸಮಿತಿ ಸಭೆಯ ನಡವಳಿಗಳು.

IWMP ಯೋಜನೆಯ PERT Chart ನಂತೆ 29 ಜಿಲ್ಲೆಗಳಲ್ಲಿ (Phase I & Phase II) ಜಿಲ್ಲಾ ಮಟ್ಟದಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಜಾನುವಾರು ಚಟುವಟಿಕೆಗಳ ಗುಣಮಟ್ಟದ ಅನುಷ್ಠಾನಕ್ಕಾಗಿ ಒಂದು ದಿನದ ತರಬೇತಿದಾರರಿಗೆ ತರಬೇತಿ (TOT) ಕಾರ್ಯಾಗಾರಗಳನ್ನು ನಡೆಸಬೇಕಾಗಿರುತ್ತದೆ. **ಈ ಕಾರ್ಯಾಗಾರವನ್ನು ಜಿಲ್ಲಾ ಜಲಾನಯನ ಅಧಿಕಾರಿಯವರು ಏರ್ಪಡಿಸುವುದು.**

ವಿವಿಧ ಜಾನುವಾರು ಚಟುವಟಿಕೆಗಳ ಗುಣಮಟ್ಟದ ಅನುಷ್ಠಾನಕ್ಕಾಗಿ, ಪಶುಸಂಗೋಪನೆ ಇಲಾಖೆಯ ಸಹಾಯಕ ನಿರ್ದೇಶಕರುಗಳು, ಪಶುವೈದ್ಯಾಧಿಕಾರಿಗಳು, ವಿಸ್ತರಣಾಧಿಕಾರಿಗಳು (ಪಸಂ), ಜಲಾನಯನ ಅಭಿವೃದ್ಧಿ ಇಲಾಖೆಯ ಎಲ್ಲಾ ತಾಲ್ಲೂಕಾ TWDO ಗಳು, ADA, AD(AH)/ LEO, NGO ಸಿಬ್ಬಂದಿಯಾದ ತಂಡದ ನಾಯಕ, ಹಾಗೂ IGA ಪರಿಣಿತರು,ಇವರುಗಳು,ಬರುವ ದಿನಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ,ಅನುವುದಾರರಾಗಿ (As Facilitators) ಭಾಗವಹಿಸಬೇಕಾಗಿರುವ ಪ್ರಯುಕ್ತ ಈ ಕಾರ್ಯಾಗಾರದಲ್ಲಿ ತರಬೇತಿ ಪಡೆಯುವರು.

**ಸದರಿ ಕಾರ್ಯಾಗಾರದಲ್ಲಿ ಮೂರು ಉಪನ್ಯಾಸಗಳನ್ನು ಏರ್ಪಡಿಸುವುದು:**

### I. ಗುಣಮಟ್ಟದ ಜಾನುವಾರು ಆರೋಗ್ಯ ಶಿಬಿರಗಳನ್ನು ಏರ್ಪಡಿಸಲು ತಾಂತ್ರಿಕ ಉಪನ್ಯಾಸ:

ದಿನಾಂಕ 09.02.2011 ರಂದು ನಿರ್ದೇಶಕರು ಜಲಾನಯನ ಅಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಜಾನುವಾರು ಘಟಕದ ತಾಂತ್ರಿಕ ಸಮಿತಿ ಸಭೆಯಲ್ಲಿ ನಿರ್ಣಯವಾಗಿರುವಂತೆ ಜಾನುವಾರು ಆರೋಗ್ಯ ಶಿಬಿರಗಳನ್ನು ಹೆಚ್ಚಿನ ಗುಣಮಟ್ಟದಲ್ಲಿ ಏರ್ಪಡಿಸಲು, ಪಶುವೈದ್ಯಕೀಯ ಮಹಾವಿದ್ಯಾಲಯಗಳ ತಜ್ಞರಿಂದ/ ಪಶುಸಂಗೋಪನೆ ಇಲಾಖೆಯಿಂದ ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಪಡೆದು ತಾಂತ್ರಿಕ ಉಪನ್ಯಾಸ ಏರ್ಪಡಿಸಬೇಕು.

### II. ಮೇವು ಅಭಿವೃದ್ಧಿ ಬಗ್ಗೆ ತಾಂತ್ರಿಕ ಉಪನ್ಯಾಸ:

ಜಲಾನಯನ ಪ್ರದೇಶದಲ್ಲಿ ಜಾನುವಾರುಗಳ ಅಭಿವೃದ್ಧಿಗಾಗಿ ಹವಾಮಾನಕ್ಕೆ ಅನುಗುಣವಾದ ವಿವಿಧ ಮೇವು ಬೆಳೆಗಳನ್ನು ಬೆಳೆಯಬೇಕಾಗಿರುತ್ತದೆ. ಮೇವು ಬೆಳೆಗಳ ಅಗತ್ಯತೆ, ಬೆಳೆಯುವ ವಿಧಾನ, ಸಂರಕ್ಷಣೆ ಮತ್ತು ಬಳಕೆಯ ಬಗ್ಗೆ, ಮೇವು ಬೆಳೆಗಳ ಅನುಷ್ಠಾನ ರೀತಿಯ ಹಾಗೂ ತಾಂತ್ರಿಕತೆಗಳ ವಿಚಾರವಾಗಿ ಕಾರ್ಯಾಗಾರದಲ್ಲಿ ಅಗತ್ಯ ಮಾಹಿತಿಗಳನ್ನು ರೈತರಿಗೆ/ ಬಳಕೆದಾರರ ಗುಂಪಿಗೆ/ಸ್ವಸಹಾಯ ಗುಂಪಿನ ಸದಸ್ಯರಿಗೆ ಯಾವ ರೀತಿಯಾಗಿ ಮೇವು ಅಭಿವೃದ್ಧಿಪಡಿಸಬೇಕು ಎಂಬುದರ ಬಗ್ಗೆ ಮೇವು ತಜ್ಞರ ಸೇವೆಯನ್ನು ಪಡೆದು (Fodder Expert) ತಾಂತ್ರಿಕ ಉಪನ್ಯಾಸವನ್ನು ಏರ್ಪಡಿಸಬೇಕು.

### III. IGA ಅನುಷ್ಠಾನ ಮತ್ತು ಗುಣಮಟ್ಟದ, ಗ್ರಾಮ ಮಟ್ಟದ ತರಬೇತಿ ( VBT) ತರಬೇತಿಗಳತಾಂತ್ರಿಕ ಉಪನ್ಯಾಸ:

IWMP ಯೋಜನೆಯಡಿಯಲ್ಲಿ ಸ್ವಸಹಾಯ ಗುಂಪಿನ ಸದಸ್ಯರಿಗೆ ಹಾಗೂ ಬಳಕೆದಾರರ ಗುಂಪಿನ ಸದಸ್ಯರಿಗೆ ಜಾನುವಾರುಗಳ ಆಯ್ಕೆ, ಜಾನುವಾರು ಸಾಕಾಣಿಕೆಯ ವಿವಿಧ ಕೌಶಲ್ಯಗಳು, ಮೇವು ಅಭಿವೃದ್ಧಿ ಮತ್ತು ಜಾನುವಾರುಗಳಲ್ಲಿ ರೋಗ ನಿಯಂತ್ರಣದ ಬಗ್ಗೆ VBTತರಬೇತಿಗಳನ್ನು ಏರ್ಪಡಿಸಬೇಕಾಗಿದೆ.

ಪಶುಸಂಗೋಪನೆ ಇಲಾಖೆಯ ಸ್ಥಳೀಯ ಪಶುವೈದ್ಯಾಧಿಕಾರಿಗಳು/ ಸಹಾಯಕ ನಿರ್ದೇಶಕರುಗಳ ಸೇವೆಯನ್ನು VBT ತರಬೇತಿಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಬಳಸಿಕೊಳ್ಳಬೇಕಾಗಿರುವುದರಿಂದ ಇದೇ ಕಾರ್ಯಾಗಾರದಲ್ಲಿ ಸ್ವಸಹಾಯ ಗುಂಪಿನ ಸದಸ್ಯರಿಗೆ ಹಾಗೂ ಬಳಕೆದಾರರ ಗುಂಪಿನ ಸದಸ್ಯರಿಗೆ ಗುಣಮಟ್ಟದ VBT ತರಬೇತಿಗಳನ್ನು ಹೇಗೆ ನಡೆಸಬೇಕು ಎಂಬುದರ ಬಗ್ಗೆ ಕೇಂದ್ರ ಕಛೇರಿಯ ಜಂಟಿ ನಿರ್ದೇಶಕರು (ಪಶು ಸಂಗೋಪನೆ) ಹಾಗು ತಾಂತ್ರಿಕ ಅಧಿಕಾರಿಗಳು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವರು.

ಜಿಲ್ಲಾ ಮಟ್ಟದಲ್ಲಿ ಈ ಒಂದು ದಿನದ ತರಬೇತಿದಾರರಿಗೆ ತರಬೇತಿ (TOT) ಕಾರ್ಯಾಗಾರಗಳನ್ನು ನಡೆಸಲು ಘಟಕವೆಚ್ಚ ತಲಾ ಒಬ್ಬರಿಗೆ ರೂ.300-00 ಗರಿಷ್ಠ ವೆಚ್ಚ ಭರಿಸುವುದು. TOT ಕಾರ್ಯಾಗಾರಕ್ಕೆ ತಗಲುವ ವೆಚ್ಚಗಳನ್ನು ಸಾಂಸ್ಥಿಕ ಮತ್ತು ಸಾಮರ್ಥ್ಯ ಬಲವರ್ಧನೆ ಶೀರ್ಷಿಕೆಯಡಿಯಲ್ಲಿ ಭರಿಸಲು ಅನುಮತಿಸಿದೆ. ಆಹ್ವಾನಿತ ತಜ್ಞರಿಗೆ (ಸಂಪನ್ಮೂಲ ವ್ಯಕ್ತಿಗಳಿಗೆ) ತಲಾ ರೂ.500-00 ಗೌರವ ಧನ ಮತ್ತು ಪ್ರಯಾಣದ ವೆಚ್ಚ ನೀಡುವುದು.TOT ತರಬೇತಿಯ ಬಗ್ಗೆ ಪ್ರತ್ಯೇಕವಾದ ಬ್ಯಾನರ್ ಬರೆಸಬೇಕು ಹಾಗು ಪಾಲ್ಗೊಳ್ಳುವ ಅಧಿಕಾರಿ/ಅಭ್ಯರ್ಥಿಗಳಿಗೆ ಬೆಳಿಗ್ಗೆ ಕಾಫಿ/ಟೀ, ಮದ್ಯಾಹ್ನದ ಊಟ,ಸಂಜೆ ಕಾಫಿ /ಟೀ, ತರಬೇತಿ ಪರಿಕರಗಳಾದ ಪ್ಲಾಸ್ಟಿಕ್ ಫೋಲ್ಡರ್ ಫೈಲ್,ಪೆನ್ನು,ಪುಸ್ತಕ ಇತ್ಯಾದಿ, ವ್ಯವಸ್ಥೆ ಮಾಡುವುದು ಹಾಗೂ ತರಬೇತಿಗಳ ದಾಖಲೀಕರಣ ಮಾಡತಕ್ಕದು.

ಜಿಲ್ಲಾ ಮಟ್ಟದಲ್ಲಿ TOT ತರಬೇತಿಗಳನ್ನು ಜುಲೈ 2011ರ ತಿಂಗಳಲ್ಲಿ ನಡೆಸಬೇಕು.TOT ನಡೆಸುವ ದಿನಾಂಕಗಳನ್ನು ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಯವರು ಜಂಟಿ ನಿರ್ದೇಶಕರು (ಪಶು ಸಂಗೋಪನೆ) ಕೇಂದ್ರ ಕಛೇರಿ, ಬೆಂಗಳೂರು, ಇವರನ್ನು ಸಂಪರ್ಕಿಸಿ ನಿಗದಿಪಡಿಸುವುದು.

ಆಯುಕ್ತರು
ಜಲಾನಯ ಅಭಿವೃದ್ಧಿ ಇಲಾಖೆ
ಬೆಂಗಳೂರು

ಪ್ರತಿಯನ್ನು

1. ಎಲ್ಲಾ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಅಗತ್ಯ ಕ್ರಮಕ್ಕಾಗಿ
2. ಸಹಾಯಕ ನಿರ್ದೇಶಕರು (ಪಶು ಸಂಗೋಪನೆ)/ ಜಾನುವಾರು ವಿಸ್ತರಣಾಧಿಕಾರಿ ಗಳು (LEOs), ಸದರಿ TOT ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳ ವ್ಯವಸ್ಥೆ ಮಾಡಲು ಹಾಗೂ ಅಗತ್ಯ ಕ್ರಮಕ್ಕಾಗಿ.
3. ಕೇಂದ್ರ ಕಛೇರಿಯ ಎಲ್ಲಾ ಘಟಕದ ಮುಖ್ಯಸ್ಥರಿಗೆ.
4. ಆಯುಕ್ತರ ಆಪ್ತ ಶಾಖೆ, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
5. ನಿರ್ದೇಶಕರ ಆಪ್ತ ಶಾಖೆ, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
6. ಕಛೇರಿ ಕಡತಕ್ಕೆ.

# ಜಿಲ್ಲಾ ಮಟ್ಟದಲ್ಲಿ ಒಂದು ದಿನದ ತರಬೇತಿದಾರರಿಗೆ ತರಬೇತಿ (TOT) ಕಾರ್ಯಾಗಾರದ ವೇಳಾಪಟ್ಟಿ

| ಕ್ರ.ಸಂ | ಸಮಯ | ಕಾರ್ಯಕ್ರಮ |
|---|---|---|
| 1 | 9-30 AM To 10-00AM | ನೋಂದಣಿ |
| 2 | 10-00AM To 10-30 AM | ಉದ್ಘಾಟನೆ |
| 3 | 10-30AM To 10-40 AM | ಚಹಾ ವಿರಾಮ |
| | Session-1 | |
| 4 | 10-40 AM To 11-10 AM | ಜಲಾನಯನ ಅಭಿವೃದ್ಧಿ ಬಗ್ಗೆ ಉಪನ್ಯಾಸ |
| 5 | 11-10 AM To 12-10 PM | ಗುಣಮಟ್ಟದ ಜಾನುವಾರು ಆರೋಗ್ಯ ಶಿಬಿರಗಳನ್ನು ಏರ್ಪಡಿಸಲು ತಾಂತ್ರಿಕ ಉಪನ್ಯಾಸ. |
| | Session-2 | |
| 6 | 12-10 PM To12-40 PM | ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜಾನುವಾರು ಮತ್ತು ಮೇವು ಅಭಿವೃದ್ಧಿ ಚಟುವಟಿಕೆಗಳಬಗ್ಗೆ ಉಪನ್ಯಾಸ |
| 7 | 12-40 PM To 1-40 PM | ಮೇವು ಅಭಿವೃದ್ಧಿ,ಸಂಸ್ಕರಣೆ, ಪೌಷ್ಠೀಕರಣದ ಬಗ್ಗೆ ತಾಂತ್ರಿಕ ಉಪನ್ಯಾಸ |
| 8 | 1-40 PM To 2-30 PM | ಭೋಜನ ವಿರಾಮ |
| | Session-3 | |
| 9 | 2-30 PM To 3-30 PM | ಆದಾಯ ಉತ್ಪನ್ನ ಚಟುವಟಿಕೆಗಳ ಅನುಷ್ಠಾನದಲ್ಲಿ ಪಶುವೈದ್ಯರ ಪಾತ್ರ ಕುರಿತು ಉಪನ್ಯಾಸ. |
| 10 | 3-30 PM To 4-30 PM | ಜಲಾನಯನ ಅಭಿವೃದ್ಧಿ ಯೋಜನೆಯ ಜಾನುವಾರು ಸಾಕಣೆಯ ಆಸಕ್ತ UG ಗುಂಪಿನ ಸದಸ್ಯರಿಗೆ ಮತ್ತು ಆದಾಯ ಉತ್ಪನ್ನ ಚಟುವಟಿಕೆಯಡಿಯಲ್ಲಿ ಜಾನುವಾರು ಸಾಕಣಾ ಫಲಾನುಭವಿಗಳಿಗೆ ಸಾಕಣಾ ಸಾಮರ್ಥ್ಯ ಹೆಚ್ಚಿಸಲು VBT ತರಬೇತಿ ನಡೆಸಲು ರೀತಿ ನೀತಿಯ ಮಾಹಿತಿ ಮತ್ತು ತರಬೇತಿಗಳ ಗುಣಮಟ್ಟ ಕಾಪಾಡುವಿಕೆ ಕುರಿತು ತಾಂತ್ರಿಕ ಉಪನ್ಯಾಸ. |
| 11 | 4-30 PM To 4-45 PM | ಚಹಾ ವಿರಾಮ |
| 12 | 4-45 PM To 5-30 PM | ಪ್ರಶ್ನೋತ್ತರ,ಚರ್ಚೆ |